



## ಸೌತೆಕಾಯಿ ದೀರ್ಘ ಬಾಳಿಕೆಗೆ ಉಪಾಯ

ಈ ಚಿತ್ರದಲ್ಲಿ ಕಾಣುತ್ತಿರುವುದು ಮಂಗಳೂರು ಸೌತೇಕಾಯಿ. ಬೇಸಿಗೆಯಲ್ಲಿ ಸೌತೆಕಾಯಿ ಬೆಳೆಯುವ ಕರಾವಳಿ ಪ್ರದೇಶದ ಜನ ಅವುಗಳನ್ನು ದೀರ್ಘಕಾಲದ ವರೆಗೆ ಉಳಿಸಿಕೊಳ್ಳಲು ತೆಂಗಿನಗರಿಯಿಂದ ಜಾಗರೂಕತೆಯಿಂದ ಮೇಲ್ಛಾವಣಿಗೆ ಕಟ್ಟುತ್ತಾರೆ. ನೆಲದಲ್ಲಿ ಸೌತೆಕಾಯಿಯನ್ನು ಹರಡುವುದರಿಂದ ಶೀತ ಹಿಡಿದು ಅದು ಕೆಡುವ ಸಂಭವ ಹೆಚ್ಚು. ಈ ರೀತಿ ಮಾಡುವುದರಿಂದ ಸೌತೆಕಾಯಿ ಒಂದು ವರ್ಷದವರೆಗೂ ಬಾಳಿಕೆ ಬರಬಲ್ಲದು. ಈಗ ಬೇರೆ ಬೇರೆ ಕಾರಣಗಳಿಂದಾಗಿ ಹೀಗೆ ಮನೆಯ ಅಟ್ಟಕ್ಕೆ ಸೌತೇಕಾಯಿ ತೂಗಿ ಹಾಕುವುದು ಕಡಿಮೆಯಾಗಿದೆ.

—ಅರುಣ್ ಕಿಲ್ಲೂರು, ದಕ್ಷಿಣಕನ್ನಡ



## ಚಳ್ಳೇಹಣ್ಣು ತಿನ್ನಿಸುವವರಿಲ್ಲ!

ಕಳ್ಳರು ಪೊಲೀಸರಿಗೆ ಚಳ್ಳೇಹಣ್ಣು ತಿನ್ನಿಸಿ ತಪ್ಪಿಸಿಕೊಂಡರು ಎಂಬ ಮಾತನ್ನು ಸಹಜವಾಗಿ ಎಲ್ಲರೂ ಕೇಳಿಯೇ ಇರುತ್ತೇವೆ. ಇಲ್ಲ ಎಲ್ಲಿಯಾದರೂ ಓದಿರುತ್ತೇವೆ. 'ಚಳ್ಳೇಹಣ್ಣು' ಪದವನ್ನು ಮೋಸ ತಂತ್ರಗಾರಿಕೆಗೆ ಪರ್ಯಾಯವಾಗಿ ಬಳಸುವುದುಂಟು. ಅದು ಯಾಕೆ ಅಂತ ಮಾತ್ರ ಗೊತ್ತಿಲ್ಲ. ಆದರೆ, ನಿಜಕ್ಕೂ 'ಚಳ್ಳೇಹಣ್ಣು' ಕಾಡಿನಲ್ಲಿ ಸಿಗುವ ರುಚಿಕರ ಪುಟ್ಟ ಹಣ್ಣು ಎಂಬುದು ಬಹುತೇಕರಿಗೆ ಗೊತ್ತೇ ಇಲ್ಲ. ಹುಳಿ ಹಾಗೂ ಸಿಹಿ ಮಿಶ್ರಿತ ಈ ಕೇಶರಿ ವರ್ಣದ ಈ ಪುಟ್ಟ ಹಣ್ಣಿನ ಗೊಂಚಲು ಬೇಸಿಗೆ ಕಾಲದಲ್ಲಿ ಮಲೆನಾಡಿನ ಕಾಡುಗಳಲ್ಲಿ ಕಂಡುಬರುತ್ತದೆ. ಸೇಬು, ಕಿತ್ತಳೆ, ಸಪೋಟಾ ಮೊದಲಾದ ಹಣ್ಣುಗಳನ್ನು ತಂದು ತಿನ್ನುವ ನಮಗೆ ಚಳ್ಳೇಹಣ್ಣು ತಂದು ತಿನ್ನಿಸುವವರೆ ಇಲ್ಲವಾಗಿದ್ದಾರೆ!

—ಜಿ. ಅರ್ಚನಾ, ಶಿರಸಿ